# ನೀವು ಕಂಡಿರಾ, ನೀವು ಕಂಡಿರಾ... ಶಿವಣ್ಣನ ಹಂದಿ ಓಟವಾ...

ಊರ ಹೊರಗಿನ ಚಂದ್ರಯ್ಯನವರ ಹೊಲದ ದಿಕ್ಕಿನಲ್ಲಿ ಎತ್ತುಗಳ ಕಟ್ಟಿದ್ದ ಮಲ್ಲನ ಗಾಡಿ ನಿಂತಿತ್ತು. ಅತ್ತಲಿಂದ ಜೋರು ಬಾಯಲ್ಲಿ ಮಲೆಯಮ್ಮ ಅದೇನೋ ಹೇಳುತ್ತಾ ಬರುತ್ತಿದ್ದಳು. ಅದೇ ದಿಕ್ಕಿನಲ್ಲಿ ಜನರ ಗುಜುಗುಜು ಮಾತು ಕೇಳಲು ಸುರುವಾಯಿತು. ಕೊಟ್ಟಿಗೆಗೂ ಮನೆಗೂ ಓಡಾಡುತ್ತಿದ್ದ ರಾಮಕ್ಕ 'ಅದೇನು ಯಾರೋ ಜಗಳವಾಡುತ್ತಿರುವಂತೆ ಕೇಳುತ್ತಿದೆ ಅಲ್ವಾ?' ಎಂದು ಹಸ ಕರಿಗೆ ಹಗ್ಗ ಬಿಡುತ್ತಿದ್ದ ಗಂಡ ಬಸಪ್ಪನನ್ನು ಕೇಳಿದಳು. ಅದಕ್ಕೆ ಬಸಪ್ಪನು 'ಯಾರೋ ಏನೋ ನಮಗೇನು? ಅದೇನು ನಿನ್ನ ಕೆಲಸ ನೋಡು' ಎಂದನು. ಆ ಮಾತಿಗೆ ಸಮಾಧಾನವಾಗದ ರಾಮಕ್ಕ ಇನ್ನೂ ನಾಲ್ಕೈದು ಹೆಜ್ಜೆ ಮನೆಯಿಂದ ಆಚೆ ಬಂದು ಹಣೆಗೆ ಕಮಾನು ಕೈಹಾಕಿ ತಲೆ ಮೇಲೆತ್ತಿ ಆ ದನಿಯ ಆಲಿಸುತ್ತಿದ್ದಳು.

ಕೇಳು ಕೇಳುತ್ತಿದ್ದಂತೆ, ನೋಡು ನೋಡುತ್ತಿದ್ದಂತೆ ಏರು ಧ್ವನಿ ಒಂದು ಎರಡಾಗಿ, ಎರಡು ಮೂರಾಗಿ ಕವಲಾಗುತ್ತಿದ್ದವು. ಆ ದನಿ ಹೂವಿನ ತೋಟದ ರಾಜನದಿರಬಹುದಾ? ಈ ದನಿ ಕೇಶವನದಿರಬಹುದಾ? ಅಂತ ಒಂದು ಅಂದಾಜಿನಲ್ಲಿ ರಾಮಕ್ಕ ನಿಂತಲ್ಲೇ ಲೆಕ್ಕ ಹಾಕತೊಡಗಿದ್ದಳು. ಅಷ್ಟೊತ್ತಿಗೆ ದನಿಗಳು ಕೇಳಿಬರುವತ್ತ ಊರ ಹುಡುಗರು ದಡದಡನೆ ಬೀದಿಯಲ್ಲಿ ಓಡಿ ಹೋಗುತ್ತಿದ್ದರು. ಅವರ ಹಿಂದೆ ಮಲ್ಲನ ಭಾಮೈದ ಶ್ರೀಧರನೂ ಓಡಿಹೋದ.

ಅತ್ತಲಿಂದ ದ್ಯಾವಕ್ಕ 'ಅಯ್ಯೋ ಅವರ ಸುಳಿ ತಿನ್ನ, ಅವರ ಬಾಯ್ಗೆ ಮಣ್ಣಾಕ, ನಮ್ಮೊಟ್ಟೆ ಉರುದಂಗೆ ಅವರ ಮನೆ ಉರುದೋಗ, ನಮಗೆ ನೆಮ್ಮದಿ ಕೊಡಲ್ವಲ್ಲಪ್ಪಾ? ನಾವೆಲ್ಲಿ ಬಿದ್ದು ಸಾಯೋದು? ನನ್ಮಗ ಅವರ ಎದೆಮೇಗ್ಲ ಅಕ್ಕಿಕಾಳ ಆಯ್ಕಂಡು ತಿನ್ನಕ್ಹೋಗಿತ್ತ? ಅವರ ತಟ್ಟೆಗೆ ಕೈ ಹಾಕಿತ್ತ?' ಎಂದು ಬೈಯುತ್ತಿರುವ ಆ ಸದ್ದು ಊರ ಹತ್ತಿರವೇ ಬಂದಂತೆ ಕೇಳುತ್ತಿತ್ತು. ಓಡಿ ಹೋದ ಹುಡುಗರು, ಊರ ಜನ, ಹೆಂಗಸರು–ಮಕ್ಕಳು ತೇರು ಮುಗಿಸಿ ಬರುತ್ತಿರುವವರಂತೆ ಬರುತ್ತಿದ್ದರು. ಆ ಗುಂಪಿನಲ್ಲೇ ಮಾಳದ ಕಡೆಯಿಂದ ಬರುತ್ತಿದ್ದ ಗಂಗಜ್ಜನ ಮಗಳು ಹುಚ್ಚಮ್ಮ 'ಅವನೇನು ಬೋಳಿಮಗ, ಆ ಹುಡುಗುನ್ಗೆ ಹೊಡ್ಡಿದ್ದಲ್ದೆಲೆ ಎಲ್ಲಾ ಸೊಂಟದ ಕೆಳಗ್ಲ ಮಾತ್ನೆ ಆಡ್ತಾನೆ? ಹೇಳೋರು ಕೇಳೋರು ಯಾರೂ ಇಲ್ಲ ಅಂದ್ರೆ ಇಂಗೆ ನೋಡು ಜನ' ಎಂದು ಹೂವಿನ ತೋಟದ ರಾಜನ ಹತ್ತಿರ ಹೇಳಿಕೊಂಡು, 'ಬೆಳೆಯುವ ಎಳೆ ಜೀವಗಳ ಮೇಲೆ ಹಲ್ಲೆ ಮಾಡವನೆ ನೀಚ' ಎಂದು ಮಲ್ಲನನ್ನು ಬೈಯುತ್ತಿದ್ದಳು.

ಅದಕ್ಕೆ ರಾಜ ಸಿಟ್ಟತ್ತಿ 'ಯಾರೂ ಹೇಳೋರು ಕೇಳೋರು ಇಲ್ಲಾ ಅಂತ ಯಂಗೆ ಬೇಕಂಗೆ ನಡ್ಕಂಡ್ರೆ ನಾವೇನಿಲ್ಲ ಬುಡುಕ್ಕೆ ಬಿಸ್ನೀರ್ ಬಿಡ್ತೀವಿ' ಅನ್ನುತ್ತಾ ಬೈದುಕೊಂಡು ಬರಬರನೆ ನಡೆದ. ಚಪ್ಪಲಿ ಇಲ್ಲದ ಕಾಲಿಗೆ ಕಲ್ಲೊತ್ತಿ ಭಾರೀ ನೋವಾಗಿ ಕಾಲು ಹಿಡಿದುಕೊಂಡು ಅಲ್ಲೇ ಕುಂತ. 'ನಾನೇನ್ ಮಾಡದು? ನಮ್ಮ ಸಿದ್ದಣ್ಣ ಹೋದ್ಮೇಲೆ ಈಕಡಿಕೆ ಹೆಚ್ಚು ಬರಕ್ಕಾಗ್ತಿಲ್ಲ. ಅವರವರ ಪಾಡಿಗೆ ಅವರಿದ್ದಾರೆ, ನಮ್ದೂ ಎಲ್ಲ ನಡಿಬೇಕಲ್ಲಾ? ನಾನು ಯಾವ್ಯಾವ್ದು ಅಂತ ನೋಡ್ಲಿ' ಎಂದು ರಾಜ ತನ್ನೆಲ್ಲಾ ನೋವು ಅವಮಾನಗಳನ್ನು ತನ್ನೆದೆಯೊಳಗೆ ಇಟ್ಟುಕೊಂಡು ಮೌನಿಯಾದ. ಇದನ್ನು ಕಂಡ ಹುಚ್ಚಮ್ಮ 'ಎದ್ದು ಅದೇನ್ ಕೆಲ್ಸ ನೋಡ್ಲಾ.

